ಪ್ರೇಮದ ಮಾರ್ಗ

# ಅಲ್ಲಿದೆ ನಮ್ಮ ಮನೆ

## ಮಧುರ ಭಕ್ತಿ ಮತ್ತು ಮುಸ್ಲಿಂ ಕವಿಗಳು



**ಸಿ.ಎನ್. ರಾಮಚಂದ್ರನ್**

ಸಾಮಾಜಿಕ ಸೌಹಾರ್ದದ ರೂಪದಲ್ಲಿ ಭಕ್ತಿಮಾರ್ಗವನ್ನು ರೂಪಿಸಿಕೊಂಡ ಸೂಫಿ ಕವಿಗಳ ಕುರಿತ ಬರಹ 'ಕೃಷ್ಣಭಕ್ತ ಮುಸ್ಲಿಂ ಕವಿಗಳು' 2022ರ ನವೆಂಬರ್ ಸಂಚಿಕೆಯಲ್ಲಿ ಪ್ರಕಟಗೊಂಡಿತ್ತು. ಆ ಬರಹದ ಮುಂದುವರಿದ ರೂಪವಾದ ಈ ಬರಹ ನಮ್ಮ ಮುಂದಿಡುತ್ತಿರುವ ಅಮೀರ್ ಖುಸ್ರೋ ಮತ್ತು ಸುಲ್ತಾನ್ ಬಹು ಅವರ ಕಾವ್ಯದ ಮಾದರಿಗಳು ಸಹೃದಯರಿಗೆ ಬೆಳುದಿಂಗಳನು ಉಣಿಸುವಂತಿವೆ.

ಭಕ್ತಿ ಮಾರ್ಗದಲ್ಲಿ ಭಕ್ತನು ತನ್ನ ಇಷ್ಟದೈವದೊಡನೆ ಅನೇಕ ಬಗೆಯ ಸಂಬಂಧಗಳನ್ನು ಕಟ್ಟಿಕೊಳ್ಳಬಹುದು: 'ದಾಸ್ಯ ಭಕ್ತಿ' (ಒಡೆಯನೊಡನೆ ಅವನ ಸೇವಕನಿಗೆ ಇರುವ ಸಂಬಂಧ – ಆಂಜನೇಯನ ರಾಮಭಕ್ತಿ), 'ಸಖ್ಯ ಭಕ್ತಿ' (ಸ್ನೇಹಿತರ ನಡುವೆ ಇರುವ ಸಂಬಂಧ – ಅರ್ಜುನನ ಕೃಷ್ಣ ಭಕ್ತಿ), ಮತ್ತು 'ವಾತ್ಸಲ್ಯ ಭಕ್ತಿ' (ತಾಯಿಗೆ ಮಗನ ಬಗ್ಗೆ ಇರುವ ಪ್ರೇಮ – ಬಾಲಕೃಷ್ಣನ ಬಗ್ಗೆ ಯಶೋದೆಗೆ ಇರುವ ಭಕ್ತಿ). ಇವುಗಳ ಹೊರತಾಗಿ, ಭಕ್ತ–ಇಷ್ಟದೈವ ಇವರ ನಡುವೆ ಮತ್ತೊಂದು ಬಗೆಯ ಸಂಬಂಧ ಸಾಧ್ಯ, ಪತಿ–ಪತ್ನಿಯರ ನಡುವೆ ಇರುವ ದಾಂಪತ್ಯಪ್ರೇಮದಂತೆ. ಅಕ್ಕಮಹಾದೇವಿಗೆ ಚೆನ್ನಮಲ್ಲಿಕಾರ್ಜುನನ (ಶಿವನ) ಬಗ್ಗೆ, ಆಂಡಾಳ್‌ಗೆ ಶ್ರೀರಂಗನಾಥನ (ಕೃಷ್ಣನ) ಬಗ್ಗೆ, ಮತ್ತು ಮೀರಾಬಾಯಿಗೆ ಕೃಷ್ಣನ ಬಗ್ಗೆ ಇದ್ದಂತಹ ಭಕ್ತಿ; ಇವರೆಲ್ಲರೂ ಶಿವನನ್ನು/ಕೃಷ್ಣನನ್ನು ತಮ್ಮ ಪತಿಯೆಂದು ಕಲ್ಪಿಸಿಕೊಂಡು, ಅವನೊಡನೆ ಒಂದಾಗುವುದಕ್ಕೆ ತೀವ್ರ ಕಾಮನೆಯನ್ನು ವ್ಯಕ್ತಪಡಿಸುತ್ತಾರೆ. ಇದನ್ನು 'ಮಧುರ ಭಕ್ತಿ' ಎಂದು ವಿದ್ವಾಂಸರು ಗುರುತಿಸುತ್ತಾರೆ.

'ಮಧುರ ಭಕ್ತಿ' ಅಕ್ಕ, ಮೀರಾ, ಇತ್ಯಾದಿ ಭಕ್ತೆಯರಲ್ಲಿ ಮಾತ್ರ ಇರಬೇಕಾಗಿಲ್ಲ. ಭಕ್ತನೂ ಕೂಡಾ ತನ್ನನ್ನು ಸ್ತ್ರೀಯಂತೆ ಹಾಗೂ ತನ್ನ ಇಷ್ಟದೈವವನ್ನು ತನ್ನ ಪತಿಯಂತೆ ಭಾವಿಸಿಕೊಂಡು, ಅವನಿಂದ ದೂರವಿರುವುದರಿಂದ ಅವನ ಸಾಮೀಪ್ಯಕ್ಕಾಗಿ ಸದಾ ಹಂಬಲಿಸಬಹುದು. ಈ ಬಗೆಯ ಭಕ್ತಿಯ ಆಳದಲ್ಲಿ ಒಂದು ಗಾಢ